<u>ಸಾಕ್ಷಿಯನ್ನು ದಿನಾಂಕ 06-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ ವಕೀಲರಿಂದಃ</u>

1. ವಾದಿಯಿಂದ ಅಧಿಕಾರ ಪತ್ರ ಪಡೆದು ಈ ದಾವೆ ನಡೆಸುತ್ತಿರುವ ವಸಂತ ರವರ ತಾಯಿ ನನ್ನ ತಾಯಿಯ ತಂಗಿಯಾಗಬೇಕು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ 31 ರಲ್ಲಿ ಒಟ್ಟಾರೆ ಸುಮಾರು 384 ಎಕರೆ ಜಮೀನು ಇರಬಹುದು. ಸದರಿ ಸರ್ವೆ ನಂಬರ್ ನಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾದ ಜಮೀನನ್ನು ನಾನು ನೋಡಿಲ್ಲ. ಆಕೆಯ ಜಮೀನಿನ ಅಕ್ಕ-ಪಕ್ಕ ಬೇರೆ ಯಾರಿಗೆ ಜಮೀನು ಮಂಜೂರಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

2. ವಾದಿ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ತೋರಿಸುವ ದಾಖಲೆ ನೋಡಿದ್ದೇನೆ. ದಾವಾ ಸ್ವತ್ತಿನ ಚಕ್ಕುಬಂಧಿ ಹೇಳಬಲ್ಲೆ. ಅದರ ಪೂರ್ವಕ್ಕೆ ಚನ್ನಮ್ಮ ಪರಮೇಶ್ವರಪ್ಪ ರವರ ಜಮೀನು, ಪಶ್ಚಿಮಕ್ಕೆ ಹಾಲೇಶಪ್ಪ ಬಿನ್ ರಾಮಪ್ಪ ರವರ ಜಮೀನು, ಉತ್ತರಕ್ಕೆ ಚಾನಲ್ ನಂತರ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ಸದರಿ ಚಕ್ಕುಬಂಧಿಗೆ ಒಳಪಟ್ಟು ದಾವಾ ಸ್ವತ್ತು ಇದೆ ಎಂದು ತೋರಿಸುವ ನಕಾಶೆಯನ್ನು ನಾನು ನೋಡಿದ್ದೇನೆ. ಈಗ ನನಗೆ ತೋರಿಸಲಾದ ನಿ.ಪಿ.-25 ರ ನಕಾಶೆಯ ಪ್ರಕಾರ ಸರ್ವೆ ನಂಬರ್ 31/16 ರ ಅಕ್ಕ-ಪಕ್ಕದಲ್ಲಿ ಯಾವುದೇ ರಸ್ತೆ ಅಥವಾ ನಾಲೆ ಇಲ್ಲ ಎಂದರೆ ಸಾಕ್ಷಿ ಪ್ರಸ್ತುತ ದಾವಾ ಸ್ವತ್ತಿನ ಪಕ್ಕದಲ್ಲಿ

ರಸ್ತೆ ಮತ್ತು ನಾಲೆ ಇದೆ ಎನ್ನುತ್ತಾರೆ. ವಾದಿ ತನ್ನ ಜಮೀನನ್ನು ಅಳತೆ ಮಾಡಿಸಿ ನಕಾಶೆ ಪಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಅಡಿಕೆ ಬೆಳೆದಿದ್ದಾರೆ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಯಾರು ಬರೆಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ನನ್ನ ಜಮೀನು ಎಲ್ಲಿ ಬರುತ್ತದೆ ಎಂಬುವುದನ್ನು ಬರೆಸಿದ್ದೇನೆ. ಸರ್ವೆ ನಂಬರ್ 31 ರ ಜಮೀನು ಮತ್ತು ನನ್ನ ಜಮೀನು ಇದೆ ಎನ್ನಲಾದ ಸರ್ವೆ ನಂಬರ್ 57 ರ ಜಮೀನುಗಳು ತುಂಬಾ ದೂರದಲ್ಲಿದೆ ಎಂದರೆ ಸಾಕ್ಷಿ ಸರ್ವೆ ನಂಬರ್ 57 ಮತ್ತು 30 ರಲ್ಲಿ ಜಮೀನು ಇದೆ ಎನ್ನುತ್ತಾರೆ. ಸರ್ವೆ ನಂಬರ್ 30 ರಲ್ಲಿ ನನ್ನ ಜಮೀನು ಇದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ.

4. ದಾವಾ ಸರ್ವೆ ನಂಬರ್ 31 ರಲ್ಲಿ 1 ನೇ ಪ್ರತಿವಾದಿ ಹೆಸರಿಗೆ ಎಷ್ಟು ಜಮೀನು ಯಾವಾಗ ಮಂಜೂರಾಗಿದೆ ಎಂದು ತೋರಿಸುವ ದಾಖಲೆಯನ್ನು ನಾನು ನೋಡಿಲ್ಲ. ಪ್ರತಿವಾದಿಯರು ಕೂಲಿ ಕೆಲಸ ಮಾಡಿಕೊಂಡು 1 ನೇ ಪ್ರತಿವಾದಿಗೆ ಮಂಜೂರಾಗಿರುವ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಯರು ನಮ್ಮ ಊರಿನಲ್ಲಿ ವಾಸವಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ಶಿವಮೊಗ್ಗದಲ್ಲಿ ವಾಸವಿದ್ದಾರೆ. ಪ್ರತಿವಾದಿಯರು ಶಿವಮೊಗ್ಗದಲ್ಲಿ ವಾಸವಿದ್ದಾರೆ ಎಂದು ವಾದಿ ಈ ದಾವೆಯಲ್ಲಿ ಹೇಳಿದ್ದರೂ ಇಲ್ಲವೊ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಜಮೀನಿಗೆ ಈ ದಾವೆಯ ವಾದಿ ಮತ್ತು ಆಕೆಯ ಮಗ ತಂಟೆ ಮಾಡಬಾರದು ಎಂದು ಕೋರಿ ನ್ಯಾಯಾಲಯಕ್ಕೆ ಪ್ರತ್ಯೇಕ ದಾವೆ ಸಲ್ಲಿಸಿರುವ ವಿಷಯ ನನಗೆ

ಗೊತ್ತಿಲ್ಲ.

5. ವಾದಿ ಮತ್ತು ಪ್ರತಿವಾದಿಯರ ನಡುವೆ ಜಮೀನಿನ ವಿಷಯವಾಗಿ ಗಲಾಟೆ ನಡೆದಿರುವ ಬಗ್ಗೆ ನನಗೆ ಮಾಹಿತಿ ಇದೆ. ಆ ಬಗ್ಗೆ ಉಭಯ ಪಕ್ಷಗಾರರು ಸಹ ಪೊಲೀಸರಿಗೆ ದೂರು ಕೊಟ್ಟಿದ್ದರು. ನಮ್ಮ ಜಮೀನನ್ನು ವಾದಿಯರು ಉಳುಮೆ ಮಾಡುತ್ತಿದ್ದಾರೆ ಎಂದು 1 ನೇ ಪ್ರತಿವಾದಿ ಪೊಲೀಸರಿಗೆ ದೂರು ಕೊಟ್ಟಿದ್ದರು. 1 ನೇ ಪ್ರತಿವಾದಿಗೆ ಸೇರಿದ ಜಮೀನು ತಮ್ಮದ್ದು ಎಂದು ವಾದಿ ಮತ್ತು ಆಕೆಯ ಅಧಿಕಾರ ಪತ್ರ ಪಡೆದಿರುವ ವಸಂತ ಗಲಾಟೆ ಮಾಡಿದ್ದರು ಎಂದರೆ ಸಾಕ್ಷಿ ವಾದಿಯರಿಗೆ ಸೇರಿದ ಜಮೀನು ನಮ್ಮದ್ದು ಎಂದು ಪ್ರತಿವಾದಿಯರೇ ಗಲಾಟೆ ಮಾಡಿದ್ದರು ಎನ್ನುತ್ತಾರೆ. ಸದರಿ ಗಲಾಟೆ ದಿನಾಂಕ 08-07-2019 ರಂದು ಆಗಿತ್ತು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಪ್ರತಿವಾದಿಯರ ಜಮೀನನ್ನು ವಾದಿಯರು ಉಳುಮೆ ಮಾಡಲು ಹೋಗಿದ್ದರಿಂದಲೇ ಗಲಾಟೆ ಆಯಿತು ಎಂದರೆ ಸಾಕ್ಷಿ ವಾದಿಯರ ಜಮೀನನ್ನು ಪ್ರತಿವಾದಿಯರು ತಮ್ಮದ್ದು ಎಂದು ಹೇಳಿದ್ದರಿಂದ ಗಲಾಟೆ ಆಯಿತು ಎನ್ನುತ್ತಾರೆ. ದಿನಾಂಕ 17.08.2019 ರಂದು ಬೆಳಗ್ಗೆ 10.30 ಗಂಟೆಗೆ ವಾದಿ ಮತ್ತು ಆಕೆಯ ಮಗ ಪ್ರತಿವಾದಿಯರ ಜಮೀನಿನ ಬಳಿ ಬಂದು ಪುನಃ ಗಲಾಟೆ ಮಾಡಿದರು ಎಂದರೆ ಸರಿ.

6. ವಾದಿಯರಿಗೆ ಮಂಜೂರಾಗಿರುವ ಜಮೀನು ನಿಖರವಾಗಿ ಎಲ್ಲಿದೆ ಎನ್ನುವುದು ವಾದಿಯರಿಗೆಗಾಗಲಿ ಅಥವಾ ನನಗಾಲಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ

ಸ್ವಾಧೀನದಲ್ಲಿರುವ ಜಮೀನಿಗೆ ಅನಗತ್ಯವಾಗಿ ತೊಂದರೆ ಕೊಟ್ಟು ವಾದಿ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಮತ್ತು 1 ನೇ ಪ್ರತಿವಾದಿಗೆ ಮಂಜೂರಾಗಿರುವ ಜಮೀನುಗಳು ಬೇರೆ ಬೇರೆ ಎಂದರೆ ಸಾಕ್ಷಿ ಪ್ರತಿವಾದಿಯರಿಗೆ ಯಾವುದೇ ಜಮೀನು ಇಲ್ಲ ಎನ್ನುತ್ತಾರೆ. ವಾದಿಯ ಸಂಬಂಧಿಕನಾಗಿ ಆಕೆಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತಿವಾದಿಯರು ವಾದಿಯ ಜಮೀನಿಗೆ ಯಾವತ್ತು ತೊಂದರೆ ಕೊಟ್ಟಿಲ್ಲ ಬದಲಾಗಿ ವಾದಿಯೇ ಪ್ರತಿವಾದಿಯರ ಜಮೀನಿಗೆ ತೊಂದರೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರತಿವಾದ ಪತ್ರದಲ್ಲಿ ಬರೆಸಿರುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ.